# ಸಂಸಾರದಲ್ಲಿ ಸಾಧನೆ



**ಭಕ್ತ :** ಗೃಹಸ್ಥಾಶ್ರಮಿಗಳಿಗೆ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆಯೆ?

**ಶ್ರೀರಾಮಕೃಷ್ಣರು :** ಏಕೆ ದೊರೆಯುವುದಿಲ್ಲ? ಕೆಸರುಮೀನಿನ ಹಾಗಿರಿ. ಅದು ಕೆಸರಿನಲ್ಲೇನೋ ವಾಸಿಸುತ್ತದೆ. ಆದರೆ ಅದು ತನ್ನ ಶರೀರಕ್ಕೆ ಕೆಸರನ್ನು ಅಂಟಿಸಿಕೊಳ್ಳುವುದಿಲ್ಲ.

ನಾನು ಒಮ್ಮೆ ಬ್ರಾಹ್ಮಸಮಾಜದವರಿಗೆ ಹೇಳಿದೆ: 'ಯಾವ ಕೊಠಡಿಯಲ್ಲಿ ಹುಣಿಸೆ ಕಾಯಿನ ಉಪ್ಪಿನಕಾಯಿ, ನೀರಿನ ಹಂಡೆ ಇವು ಇವೆಯೋ, ಅದೇ ಕೊಠಡಿಯಲ್ಲಿ ವಿಷಮಶೀತ ಜ್ವರದ ರೋಗಿ ಮಲಗಿದ್ದಾನೆ ಅಂತ ಇಟ್ಟುಕೊಳ್ಳಿ. ಆತನನ್ನು ರೋಗ ಹೇಗೆ ಬಿಟ್ಟು ತೊಲಗಬೇಕು ಹೇಳಿ? ಹುಣಸೆಕಾಯಿನ ಉಪ್ಪಿನಕಾಯಿ ಭಾವನೆಯೇ ಸಾಕು, ಬಾಯಲ್ಲಿ ನೀರು ಊರಬೇಕಾದರೆ.'

ಪುರುಷನಿಗೆ ಹೆಂಗಸು ಹುಣಿಸೆಕಾಯಿನ ಉಪ್ಪಿನಕಾಯಿ ಇದ್ದ ಹಾಗೆ. ಜೊತೆಗೆ ವಿಷಯತೃಷ್ಣೆಯಂತೂ ಮನುಷ್ಯನಿಗೆ ಯಾವಾಗ ನೋಡಿದರೂ ರೋಗಿಯ ಜಲತೃಷ್ಣೆಯಂತೇ ಹತ್ತಿಕೊಂಡೇ ಇರುತ್ತದೆ. ಅದಕ್ಕೆ ಕೊನೆಯೆಂಬುದೇ ಇಲ್ಲ. ವಿಷಮಶೀತಜ್ವರದ ರೋಗಿ ಹೇಳುತ್ತಾನೆ: 'ಒಂದು ಹಂಡೆಯ ನೀರನ್ನೇ ಕುಡಿದುಬಿಡುತ್ತೇನೆ' ಎಂದು. ತಡೆದುಕೊಳ್ಳುವುದು ಬಹಳ ಕಠಿಣ.

ಈ ಜಗತ್ತಿನಲ್ಲಿ ಬಹಳ ಕೋಟಲೆಗಳಿವೆ. ಈ ಕಡೆಗೆ ಹೋದರೆ ಬೀಳುತ್ತದೆ ಮಚ್ಚಿನೇಟು; ಆ ಕಡೆಗೆ ಹೋದರೆ ಬೀಳುತ್ತದೆ ಬರಲೇಟು; ಮತ್ತೆ ಬೇರೆ ದಿಕ್ಕಿಗೆ ಹೋಗೋಣ ಅಂದರೆ ಬೀಳುತ್ತದೆ ಪಾಪಾಸಿನೇಟು. ಜೊತೆಗೆ ಏಕಾಂತದಲ್ಲಿ ವಾಸಿಸದ ಹೊರತು ಭಗವಚ್ಚಿಂತನೆ ಸಾಧ್ಯವಿಲ್ಲ.

ಅಕ್ಕಸಾಲಿಗ ಚಿನ್ನ ಕರಗಿಸಿ ಒಡವೆ ಮಾಡುತ್ತಾನೆ. ಹಾಗೆ ಕರಗಿಸುವಾಗ ಅನೇಕರು ಆತನನ್ನು ಕರೆಯುತ್ತಲೇ ಇದ್ದರೆ, ಆತ ಅದನ್ನು ಕರಗಿಸುವ ಬಗೆ ಹೇಗೆ? ಅಕ್ಕಿ ತೊಳೆಸಬೇಕಾಗಿದೆ ಅಂತ ಇಟ್ಟುಕೊಳ್ಳಿ. ಎಲ್ಲಾ ಕೆಲಸ ಬಿಟ್ಟು ಆ ಕೆಲಸದಲ್ಲೇ ಕುಳಿತುಕೊಳ್ಳಬೇಕು. ಆಗಾಗ ಅದನ್ನು ಕೈಗೆ ತೆಗೆದುಕೊಂಡು ಬೆಳ್ಳಗಾಯಿತೆ ಇಲ್ಲವೆ ಅಂತ ನೋಡುತ್ತಿರಬೇಕು. ಅಕ್ಕಿ ತೊಳೆಸುತ್ತ ಅನೇಕ ಸಲ ಅಲ್ಲಿಗಿಲ್ಲಿಗೆ ಹೋಗಬೇಕಾಗಿ ಬಂದರೆ ಅದನ್ನು ಚೆನ್ನಾಗಿ ತೊಳೆಸುವ ಬಗೆ ಹೇಗೆ?

**ಭಕ್ತ :** ಹಾಗಾದರೆ ಮಾರ್ಗವೇನು?

**ಶ್ರೀರಾಮಕೃಷ್ಣರು:** ಒಂದು ಮಾರ್ಗವಿದೆ. ತೀವ್ರ ವೈರಾಗ್ಯ ಉಂಟಾದರೆ, ಜಯಶೀಲರಾಗಬಹುದು. ಯಾವುದು ಮಿಥ್ಯಾ ಎಂಬುದಾಗಿ ಗೊತ್ತಾಗುವುದೋ ಅದನ್ನು ಒಡನೆಯೇ ದೃಢ ಮನಸ್ಸಿನಿಂದ ತ್ಯಜಿಸಿಬಿಡಬೇಕು. ಒಮ್ಮೆ ನನಗೆ ಬಹಳವಾಗಿ ಕಾಯಿಲೆಯಾಗಿದ್ದಾಗ ಗಂಗಾಪ್ರಸಾದ ಸೇನನ ಹತ್ತಿರಕ್ಕೆ ನನ್ನನ್ನು ಕರೆದುಕೊಂಡು ಹೋದರು. ಗಂಗಾಪ್ರಸಾದ ಹೇಳಿದ : 'ನಾನು ನಿಮಗೆ ಔಷಧವನ್ನೇನೋ ಕೊಡುತ್ತೇನೆ. ಆದರೆ ನೀವು ಮಾತ್ರ ಒಂದು ತೊಟ್ಟು ನೀರನ್ನೂ ಕುಡಿಯಬಾರದು. ದಾಳಿಂಬೆ ರಸ ಬೇಕಾದರೆ ಕುಡಿಯಬಹುದು.' ನೀರು ಕುಡಿಯದೆ ಹೇಗೆ ಬದುಕಿರಲಾದೀತು ಎಂದು ಎಲ್ಲರೂ ಚಿಂತಿಸಲಾರಂಭಿಸಿದರು. ಆದರೆ ನಾನು ಮಾತ್ರ ನೀರು ಕುಡಿಯುವುದಿಲ್ಲವೆಂದು ಸತ್ಯಸಂಕಲ್ಪ ಮಾಡಿಕೊಂಡುಬಿಟ್ಟೆ. ನಾನು ನನಗೇ ಹೇಳಿಕೊಂಡೆ: 'ನಾನು ಬಾತುಕೋಳಿಯಲ್ಲ — ಪರಮಹಂಸ. ನಾನು ಹಾಲನ್ನೇ ಕುಡಿಯುತ್ತೇನೆ.'

ಕೆಲವು ಕಾಲ ನಿರ್ಜನಪ್ರದೇಶದಲ್ಲಿ ಇರಬೇಕು. ಅಜ್ಜಿಯನ್ನು ಮುಟ್ಟಿಬಿಟ್ಟರೆ ಇನ್ನು ಭಯಪಡಬೇಕಾಗೇನೂ ಇರುವುದಿಲ್ಲ. ಚಿನ್ನವಾಗಿಬಿಟ್ಟ ನಂತರ ಅದು ಎಲ್ಲಿ ಬಿದ್ದಿದ್ದರೆ ತಾನೆ ಏನು? ನಿರ್ಜನ ಪ್ರದೇಶದಲ್ಲಿದ್ದು ಭಕ್ತಿಯನ್ನು ಗಳಿಸಿಕೊಂಡುಬಿಟ್ಟರೆ, ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡುಬಿಟ್ಟರೆ, ಅನಂತರ ಸಂಸಾರದಲ್ಲೂ ಇರಬಹುದು.

ಸಂಸಾರಕ್ಕೆ ಕಾಲಿಟ್ಟರೆ ಮಾನಸಿಕ ಶಕ್ತಿ ವೃಥಾ ವ್ಯಯವಾಗಿ ಹೋಗುತ್ತದೆ. ಆದರೆ ಸಂಸಾರಿ ಸಂನ್ಯಾಸಜೀವನವನ್ನು ಕೈಗೊಂಡರೆ, ವೃಥಾ ವ್ಯಯವಾಗಿ ಹೋಗಿದ್ದ ಶಕ್ತಿ ಮತ್ತೆ ಕೂಡಿಬಂದುಬಿಡುತ್ತದೆ. ಮೊದಲನೇ ಜನ್ಮವನ್ನು ತಂದೆ ಕೊಡುತ್ತಾನೆ; ಎರಡನೆಯ ಜನ್ಮ ದೊರೆಯುತ್ತದೆ, ಉಪನಯನದ ಸಮಯದಲ್ಲಿ. ಇನ್ನೊಮ್ಮೆ ಜನ್ಮ ದೊರೆಯುತ್ತದೆ, ಸಂನ್ಯಾಸದ ಸಮಯದಲ್ಲಿ.

ಸಾಧನೆ ಅತ್ಯಂತ ಆವಶ್ಯಕ. ಆಗ ಏಕೆ ಆತನ ಸಾಕ್ಷಾತ್ಕಾರ ದೊರೆಯುವುದಿಲ್ಲ? ಗುರುವಾಕ್ಯದಲ್ಲಿ ನಿಜವಾದ ಶ್ರದ್ಧೆಯುಂಟಾಯಿತು ಎಂದರೆ, ಮತ್ತೆ ಅಧಿಕವಾಗಿ ಕಷ್ಟಪಡಬೇಕಾಗಿಲ್ಲ. *(ವಚನವೇದ, ಭಾಗ ೧, ಪು.೨೧೩-೧೬)*

**ಶ್ರೀರಾಮಕೃಷ್ಣ ವಚನವೇದದಿಂದ**